# ಪುಣ್ಯಭೂಮಿ ಭಾರತ – ತೀರ್ಥಯಾತ್ರೆ ಪರಂಪರೆ

ಡಾ. ಪ್ರಸನ್ನಾಕ್ಷಿ. ಕೆ.ಎಲ್.

ಭರತಖಂಡದ ಪ್ರತಿಯೊಂದು ಸ್ಥಳವೂ ತೀರ್ಥಕ್ಷೇತ್ರ. ಈ ರೀತಿ ಇಲ್ಲಿನ ಜನರು ತಾವು ಬದುಕುವ ಪರಿಸರದಲ್ಲೂ, ತಮ್ಮ ಬದುಕಿನಲ್ಲೂ ದಿವ್ಯತೆಯನ್ನು ಕಂಡು, ತಮ್ಮ ದೈನಂದಿನ ಬದುಕನ್ನು ಆಧ್ಯಾತ್ಮಿಕಗೊಳಿಸುತ್ತಾರೆ. ಈ ಆಶಯವನ್ನು ಇಲ್ಲಿ ವಿವರಿಸುವ ಲೇಖಕಿ, ಮೈಸೂರು ಮಹಾರಾಣಿ ಕಾಲೇಜಿನ ನಿವೃತ್ತ ಪ್ರಾಂಶುಪಾಲರು. ಸಂಸ್ಕೃತ ಭಾಷೆ ಹಾಗೂ ಸಾಹಿತ್ಯ, ವೇದಾಂತ ಹಾಗೂ ಇನ್ನಿತರ ಆಧ್ಯಾತ್ಮಿಕ ಕೃತಿಗಳನ್ನು ವಿಶೇಷವಾಗಿ ಅಧ್ಯಯನ ಮಾಡಿರುವ ಅವರು ಮೈಸೂರು ಆಶ್ರಮದ ಭಕ್ತರು. ದೀರ್ಘಕಾಲದಿಂದ ಅವರು 'ವಿವೇಕಪ್ರಭ' ಪತ್ರಿಕೆಯಲ್ಲಿ ಹಲವು ಲೇಖನಗಳನ್ನು ಬರೆಯುತ್ತ ಬಂದಿದ್ದಾರೆ.


### ಪೀಠಿಕೆ

ಸೃಷ್ಟಿಯಾದ ಜೀವಿಗಳು ತಮ್ಮ ತಮ್ಮ ಸ್ವರೂಪ ಕಡೆದಂತೆ ಉಳಿಯಲು ಒಂದು ಆಸರೆಯನ್ನಪೇಕ್ಷಿಸುತ್ತವೆ. ಅಲ್ಲಿ ಅವು ಹೃಷ್ಟ ಪುಷ್ಟವಾಗಿ ಸಮೃದ್ಧವಾಗಿ ಬೆಳೆದು ಆನಂದದಿಂದ ವಿಹರಿಸಲು ಬೇಕಾದ ಸಕಲ ಸಮೃದ್ಧಿಯನ್ನು ಬಯಸುತ್ತವೆ. ಸಕಲ ಚರಾಚರ ಪದಾರ್ಥಗಳ ಅಣು ಅಣುವೂ ಉಳಿದು ಬೆಳೆದು ತಮ್ಮ ಸಂತತಿ ವಿಸ್ತರಿಸಲು ಯೋಗ್ಯವಾದ ದೃಢನೆಲೆಗಾಗಿ ಹಂಬಲಿಸುತ್ತವೆ. ಅಂತಹ ಒಂದು ನೆಲೆಯೇ 'ಭೂಮಿ'. ಇದು,

**ತೇಷಾಂ ಸರ್ವಭೂತಾನಾಂ ಮಾತಾ ಮೇದಿನೀ ಮಹತೀ**
**ಮಹೀ ಸಾವಿತ್ರೀ ಗಾಯತ್ರಿ ಜಗತ್ಯುರ್ವೀ ಪೃಥ್ವೀ ಬಹುಳಾ**
**ವಿಶ್ವಾ ಭೂತಾ ಕತಮಾ ಕಾ ಯಾ ಸಾ ಸತ್ಯೇತ್ಯಮೃತೇತಿ ವಸಿಷ್ಠಃ ।**

*(ತೈತ್ತಿರೀಯ, ನಾರಾಯಣ ಅನುವಾಕ ೨೧)*

'ದೇವ, ಗಂಧರ್ವ, ಮನುಷ್ಯ, ಪಿತೃ, ಅಸುರ ಎಂಬ ಐದು ಬಗೆಯ ಯೋನಿಗಳಲ್ಲಿ ಜನ್ಮತಳೆದ ಸಮಸ್ತ ಪ್ರಾಣಿಭೂತಗಳಿಗೆ (ಪ್ರಾಣ ಉಳ್ಳವುಗಳಿಗೆ) ತಾಯಿಯಾಗಿರುವಳು (ಮಾತಾ), ಎಲ್ಲಾ ಜೀವಿಗಳಲ್ಲೂ ಸಮಾನವಾದ ವಾತ್ಸಲ್ಯವುಳ್ಳವಳಾಗಿ ಎಲ್ಲರನ್ನೂ ಎಲ್ಲವನ್ನೂ ಪ್ರೀತಿಯಿಂದ ಸಲಹುವವಳು (ಮೇದಿನೀ). ಸೃಷ್ಟವಾದ ಈ ಎಲ್ಲಾ ಜೀವಜಾತಗಳು ಸುಖವಾಗಿ ನೆಲೆಸಲು ಅತಿ ದೊಡ್ಡದಾದ ಗಾತ್ರವುಳ್ಳವಳು (ಮಹತೀ). ಪವಿತ್ರವಾದ ಗಿರಿ ಪರ್ವತ ನದ ನದಿ ಇತ್ಯಾದಿ ಪ್ರಾಕೃತಿಕ ಸಿರಿಯಿಂದ ಕೂಡಿ, ಭಗವದ್ಭಾವಪೂರ್ಣರಾದ ನಿತ್ಯ ನಿರಂತರ ಭಗವಚ್ಚಿಂತನೆಯಲ್ಲೇ ಲೀನರಾದ ಪರಮಪಾವನರಾದ ಸಜ್ಜನರಿಂದ ಅತ್ಯಂತ ಆದೃತಳಾದವಳು (ಮಹೀ). ಸವಿತೃದೇವನಿಂದ ಪ್ರಚೋದಿತಳಾಗಿ ಜೀವಭರಣಗಳಾದ ವೃಕ್ಷೌಷಧಿ ಪತ್ರಪುಷ್ಪಫಲಾದಿಗಳನ್ನು ಉತ್ಪತ್ತಿ ಮಾಡುವವಳು (ಸಾವಿತ್ರೀ), ನಾದದ ಮೂಲಕ ಉಪಾಸಿಸುವವರಲ್ಲಿ ಪ್ರಾಣಶಕ್ತಿಯನ್ನು ಸಂವರ್ಧಿಸಿ, ತತ್ತ್ವಜ್ಞಾನಬೋಧೆಯನ್ನು ನೀಡಿ ಜೀವಿ ತನ್ನತನವನ್ನೂ ತನ್ನ ಮೂಲವನ್ನೂ ಅರಿತು ತನ್ನ ಸ್ವರೂಪ ಕೆಡದಂತೆ ರಕ್ಷಿಸಿಕೊಳ್ಳುವಂತೆ ಮಾಡುವವಳು(ಗಾಯತ್ರೀ), ಸೃಷ್ಟವಾದ ಎಲ್ಲವುಗಳ ಹುಟ್ಟು-ಸಾವುಗಳಿಗೆ ನಿರಂತರ ಸಾಕ್ಷೀಭೂತಳಾಗಿರುವವಳು(ಜಗತೀ), ಸಸ್ಯಸಮೃದ್ಧಳಾಗಿರುವವಳು (ಉರ್ವೀ). ವಿಶಾಲಳೂ ಚಿನ್ನ ಬೆಳ್ಳಿ ಕಬ್ಬಿಣ ಮುಂತಾದ ಜೀವನಸೌಕರ್ಯ ಸಾಧನಗಳಿಗೆ ಆವಶ್ಯಕವಾದ ಧಾತುಗಳನ್ನು ಬಹುವಾಗಿ ಹೊಂದಿರುವವಳು(ಬಹುಲಾ), ಪರಮಾತ್ಮನು ಪ್ರವೇಶಿಸಲು ಯೋಗ್ಯವಾದ




ಶರೀರರೂಪ ಅನಂತಕೋಟಿ ಸಂಖ್ಯೆಯ ಪುರಗಳನ್ನುಳ್ಳವಳು(ವಿಶ್ವಾ). ಪಂಚಭೂತಾತ್ಮಕಳು(ಭೂತಾ)ಆತ್ಯಂತಿಕವಾದ ಸುಖವನ್ನು ಕೊಡುವವಳು(ಕತಮಾ). ಮಾತುಮನಗಳಿಗೆ ಮೀರಿದ ಅನಿರ್ವಚನೀಯವಾದ ವೈಭವವುಳ್ಳವಳು(ಕಾ). ಸತ್ಯರೂಪ ಪರಮಪುರುಷನ ಸಹಧರ್ಮಿಣಿ ಸಹಯೋಗಿನಿಯಾದವಳು(ಸತ್ಯಾ). ಮೋಕ್ಷ ಸಾಧನಾನುಷ್ಠಾನವನ್ನು ಸಫಲಗೊಳಿಸುವವಳು (ಅಮೃತಾ) ಎಂದು ಭೂಮಿಯನ್ನು ವಸಿಷ್ಠರು ಪರಿಭಾವಿಸಿರುವರು.'

ಇಂತಹ ಭೂಮಿಯನ್ನು ಈ ಎಲ್ಲಾ ಭಾವಗಳಿಂದಲೂ ಅನುಭವಿಸಿ ಆದರಿಸಿ ಪೂಜಿಸಿದ ಮಹಿಮೋನ್ನತರ ನಾಡು 'ಭಾರತ' ಈ ಭೂಮಿಯ ಒಂದು ಭಾಗ ಮಾತ್ರವಾಗಿದೆ. ಸಕಲವೇದಗಳಲ್ಲಿ ವಿಜೃಂಭಿಸುವ, ವೇದಸಾರವಾದ ಪರಬ್ರಹ್ಮವನ್ನನುಭವಿಸಿ, ಸಕಲರನ್ನೂ, ಸಕಲವನ್ನೂ ಸಮಾನವಾದ ಭಾವದಿಂದ ಪ್ರೀತಿಸಿದ ಮಹಾಜ್ಞಾನಿಗಳ ನಾಡು ಈ ಭಾರತ. (ಭಾತಿ ಸರ್ವೇಷು ವೇದೇಷು ರತಿಸ್ಸರ್ವೇಷು ಜಂತುಷು। ತರಣಂ ಸರ್ವತೀರ್ಥಾನಾಂ ತಸ್ಮಾದ್ಭಾರತ ಮುಚ್ಯತೇ॥)

### ಭಾರತ

ನಿತ್ಯವೂ, ನಿರ್ವಿಕಲ್ಪವೂ ನಿರಂಜನ ನಿರವಯವ ನಿಷ್ಪ್ರಪಂಚವೂ ಆದ ಜ್ಯೋತಿ 'ಭಾ'. ಆ ತನ್ನ ಬೆಳಕಿನಿಂದ ಇತರ ವಸ್ತುಗಳ ಜ್ಞಾನವನ್ನುಂಟುಮಾಡಿ, ಆ ಜ್ಞಾನದಿಂದ ತಂಪನ್ನೂ ಆನಂದವನ್ನೂ ಶಾಂತಿ ಸಮೃದ್ಧಿಯನ್ನು ಉಂಟುಮಾಡುವುದು- ಎಂಬುದನ್ನರಿತು, ಆ 'ಜ್ಯೋತಿ'ಪ್ರಾಪ್ತಿಗಾಗಿ ಹಂಬಲಿಸುವವರ (=ರತ) ದಿವ್ಯಭವ್ಯ ನಾಡು ಭಾರತ. ಆದುದರಿಂದಲೇ ವೇದ ಉಪನಿಷತ್ತುಗಳಲ್ಲಿ-ಉತ್ತಿಷ್ಠತ ಜಾಗ್ರತ ಅಗ್ನಿಮಿಚ್ಛಧ್ವಂ ಭಾರತಾಃ (ತೈತ್ತಿರೀಯ

ಬ್ರಾಹ್ಮಣ) ಉತ್ತಿಷ್ಠತ ಜಾಗ್ರತ ಪ್ರಾಪ್ಯವರಾನ್ನಿಬೋಧತ, (ಕಠೋಪನಿಷತ್ತು, ೧.೩.೧೪) ಇಹಚೇದವೇದೀದಥ ಸತ್ಯಮಸ್ತಿ (ಕೇನ ಉಪನಿಷತ್ತು, ೨.೨.೫) ಜೀವಿಯ ಜೀವನದ ಸಾರ್ಥಕತೆಯನ್ನು ಬೋಧಿಸುವ ಈ ರೀತಿಯ ಉದ್ಘೋಷಣೆಗಳು ಅನೇಕವಾಗಿ ಕಂಡುಬರುತ್ತವೆ. ದೇವತೆಗಳ ಒಡೆಯನಾದ ಇಂದ್ರನಿಗೂ ಪ್ರಿಯವಾದ ನಾಡಿದು. ಧರ್ಮದ ಯೋಗದ ತ್ಯಾಗದ ಔನ್ನತ್ಯವನ್ನು ತಮ್ಮ ಸದಾಚಾರಗಳಿಂದ ಅನುಷ್ಠಿಸಿ ಉತ್ಕೃಷ್ಟತಮವಾದ ಜೀವನ ನಡೆಸಿ ಆದರ್ಶದ ಪರಂಪರೆಯನ್ನು ಹಾಕಿಕೊಟ್ಟ ಮಹಾ ತೇಜಸ್ವಿಗಳಾದ, ಮಾಂಧಾತಾ, ಇಕ್ಷ್ವಾಕು, ಅಂಬರೀಷ ಮೊದಲಾದ ಮಹನೀಯರು ಪಾವನಗೊಳಿಸಿದ ನಾಡು 'ಭಾರತ'. ಬಾಳಿನ ಗುರಿಯನ್ನು ರಾಷ್ಟ್ರದ ಗುರಿಯೊಡನೆ ಸಮನ್ವಯಗೊಳಿಸಿ ಅದನ್ನು ಸಾಧಿಸಲು ಜ್ಞಾನಿಗಳು ಕಟ್ಟಿದ ನಾಡು 'ಭಾರತ'. ಜ್ಞಾನ ಮತ್ತು ಕರ್ಮ, ಅಂತಃಪ್ರಜ್ಞೆ ಮತ್ತು ಬಹಿಃಪ್ರಜ್ಞೆ ಎರಡರ ಸಮನ್ವಯವನ್ನಳವಡಿಸಿಕೊಂಡ ಕುಶಲಮತಿಗಳಾದವರು ದೇವಭೂಮಿಯಾಗಿಸಿದ ನಾಡು ಇದು. ಇದಕ್ಕಾಗಿಯೇ ಭಗವಂತನು ತನ್ನೆಲ್ಲಾ ಲೀಲಾ ವಿಭೂತಿಗಳನ್ನು ನಡೆಸಲು ಆಯ್ಕೆ ಮಾಡಿಕೊಂಡ ಭೂಮಿ ಇದು.

### ಪುಣ್ಯಭೂಮಿ-ಭಾರತ

ಇಂತಹ ದಿವ್ಯತೆ ಭವ್ಯತೆ ಮಹಿಮೆ ಮೆರೆದ ಈ ದೇಶದ ವೈಶಿಷ್ಟ್ಯವನ್ನು ವೇದಗಳು, ಗರುಡ, ವಿಷ್ಣು, ಮಾರ್ಕಂಡೇಯ, ಬ್ರಹ್ಮವೈವರ್ತ ಭಾಗವತ, ಮೊದಲಾದ ಪುರಾಣಗಳೂ ಮಹಾಭಾರತವೂ ಕೊಂಡಾಡುತ್ತವೆ. ಅವು ತಿಳಿಸುವಂತೆ–

ಭಗವಂತ ಕರುಣೆಯಿಂದ ತನ್ನ ದಿವ್ಯ ಸಾನ್ನಿಧ್ಯವನ್ನು ಇಲ್ಲಿಗೆ ದಯಪಾಲಿಸಿದ್ದಾನೆ. ಇಲ್ಲಿ ಅವನು ಬದರೀಕ್ಷೇತ್ರದಲ್ಲಿ ನರ-ನಾರಾಯಣ ರೂಪದಲ್ಲಿದ್ದು ಸಂಯಮಶೀಲರಾದ ಮನುಷ್ಯರಿಗೆ ತಪಸ್ಸಿನ ಆದರ್ಶವನ್ನು ಕಲ್ಪಿಸಿದ್ದಾನೆ. ಧರ್ಮಜ್ಞಾನ ವೈರಾಗ್ಯ ಐಶ್ವರ್ಯ ಇಂದ್ರಿಯಜಯ ಶಾಂತಿ ಇವು ಅಭಿವೃದ್ಧಿಗೊಂಡು ಆತ್ಮ ಸಾಕ್ಷಾತ್ಕಾರ ದೊರಕಿಸಿಕೊಡುವ ತಪಸ್ಸಿಗೆ ಆದರ್ಶವಾಗಿ ಈ ಕಲ್ಪದ ಕೊನೆಯವರೆಗೂ ಅವನು ಅವ್ಯಕ್ತವಾಗಿ ನೆಲೆಸಿರುತ್ತಾನೆ- ಎಂದು ಸಾವರ್ಣಿ ಮನುವಿಗೆ ಪಾಂಚರಾತ್ರಾಗಮವನ್ನು ಉಪದೇಶಿಸಿದ ನಾರದರು ತಿಳಿಸುತ್ತಾರೆ.

ಮಾಹಾತ್ಮ್ಯ ಸೂಚಕವಾದ ಅನೇಕ ರೋಚಕ ಕತೆಗಳನ್ನು ಹೊಂದಿರುವ, ಮೈನಾಕ ಸಹ್ಯ ಗೋವರ್ಧನ ದೇವಗಿರಿ ರೈವತಕ ಮಲಯ ಮಹೇಂದ್ರ ಮೊದಲಾದ ಪಾವನತಮವಾದ ನೂರಾರು ಗಿರಿ ಪರ್ವತಗಳು ಇಲ್ಲಿವೆ. ಇಲ್ಲಿ ಹರಿಯುವ ಗೋದಾವರೀ ಅಸಿಕ್ನೀ ಮರುದ್ವೃಧಾ ಮೊದಲಾದ ಪವಿತ್ರವಾದ ನದಿಗಳ ಹೆಸರನ್ನು ಸ್ಮರಿಸಿದರೂ ಸಾಕು ಜೀವನ ಕಲ್ಮಷರಹಿತವಾಗಿ ನಿರ್ಮಲಗೊಳ್ಳುತ್ತದೆ. ಈ ನದಿಗಳು ಈ ಭೂಭಾಗವನ್ನು ಸುಪುಷ್ಟವಾಗಿಯೂ ಸಸ್ಯಶ್ಯಾಮಲೆಯಾಗಿಯೂ ಕಂಗೊಳಿಸುವಂತೆ ಮಾಡಿವೆ.

ತಮ್ಮ ತಮ್ಮ ಸಾತ್ವಿಕ ರಾಜಸ ತಾಮಸ ಕರ್ಮಗಳಿಗೆ ತಕ್ಕಂತೆ ಇಲ್ಲಿ ದೇವ ಮನುಷ್ಯ ಪಶು ಪಕ್ಷಿ ಜನ್ಮಗಳನ್ನು ಪಡೆದ ಎಲ್ಲಾ ಜೀವಿಗಳಿಗೂ ಮುಕ್ತಿ ಇದೆ. ಯಾವ ವರ್ಗಕ್ಕೇ ಸೇರಿದ ಯಾವ ಜೀವಿಯಾದರೂ ಮೋಕ್ಷಕ್ಕೆ ಅರ್ಹ. ಆದುದರಿಂದ ಎಲ್ಲರಿಗೂ ಅವರವರ ಕರ್ಮಭಾವಗಳಿಗನುಗುಣವಾದ ಮೋಕ್ಷಸಾಧನಾ ಮಾರ್ಗವನ್ನು ವಿಧಿಸಲಾಗಿದೆ. ಅದು ಸರ್ವತ್ರ ಸರ್ವಕಾಲದಲ್ಲಿ ಸರ್ವದರಲ್ಲಿ ನೆಲೆನಿಂತಿರುವ ಪರಮಪುರುಷನಾದ ಪರಮಾತ್ಮನಲ್ಲಿ ನಾವು ಹೊಂದುವ ಭಕ್ತಿಯೋಗ ಲಕ್ಷಣವನ್ನವಲಂಬಿಸಿದೆ. ಭಗವಂತನಲ್ಲಿರಿಸಿದ ಭಕ್ತಿ ಸಕಲ ಕಲ್ಮಷಗಳನ್ನು ಕಳೆಯುವುದು. ಅಲ್ಲದೆ ಆಯಾ ಜೀವಿಗಳ ಕರ್ಮಾನುಸಾರ ದೊರಕಬಹುದಾದ 'ಅವಿದ್ಯೆ' ಎಂಬ ಹೃದಯ ಗ್ರಂಥಿಯನ್ನೂ ಅದು ಕತ್ತರಿಸಿ ಹಾಕುತ್ತದೆ. ಇಂತಹ ಭಕ್ತಿ ಬೆಳೆಯಲು ಅಗತ್ಯವಾದ, ಭಗವಂತನನ್ನು ಹಲವು ಬಗೆಯಲ್ಲಿ ಆರಾಧಿಸುವ ಪ್ರೀತಿಸುವ ಭಕ್ತರ ಸಂಗ, 'ಭಾರತ'ದಾದ್ಯಂತ ಮೂಲೆ ಮೂಲೆಯನ್ನು ತುಂಬಿಕೊಂಡಿದೆ. ಹಾಗೆಂದೇ ಸ್ವಾಮಿ ವಿವೇಕಾನಂದರು ಭಾರತದ ಕುಗ್ರಾಮದ ಒಬ್ಬ ಅತ್ಯಂತ ಕಿರಿಯ ರೈತನನ್ನು ಮಾತನಾಡಿಸಿದರೂ ಅವನ ಬಾಯಿಂದ ಬರುವ ಮಾತುಗಳು ಧರ್ಮ-ಕರ್ಮವನ್ನೇ ಆಧರಿಸಿರುತ್ತದೆ-ಎಂದು ಪಾಶ್ಚಾತ್ಯರಿಗೆ ಪರಿಚಯಿಸುತ್ತಾರೆ.

### ದೇವತೆಗಳೂ ಬಯಸುವ ಭಾರತಜನ್ಮ

ಭಾರತದಲ್ಲಿ ಹುಟ್ಟಿದವರ ಧನ್ಯತೆ ಮಹಿಮೆ ಮುಂತಾದ ಕುರಿತು ದೇವತೆಗಳೂ (**'ಗಾಯಂತಿ ದೇವಾಃ ಕಿಲ ಗೀತಕಾನಿ...'** *ವಿಷ್ಣುಪುರಾಣ,೨.೩.೨೪*) ಕೊಂಡಾಡುವರು. 'ಈ ಭಾರತ ವೈಕುಂಠದ ಅಂಗಳ. ಇಲ್ಲಿ ಭಗವಂತನ ಸೇವೆ ಮಾಡಲು, ಯೋಗ್ಯವಾದ ಮಾನವ ಜನ್ಮ ಪಡೆಯಲು ಜೀವಿಗಳು ಎಷ್ಟು ಪುಣ್ಯಮಾಡಿದ್ದಾರೋ ಏನೊ? ಇಲ್ಲ ಭಗವಂತನೇ ಒಲಿದು ಅವರಿಗೆ ಈ ದೇಶದಲ್ಲಿ ಈ ಜನ್ಮ ಕರುಣಿಸಿದ್ದಾನೆ ಎನ್ನಿಸುತ್ತದೆ. ಭಗವಂತ ನಮಗೂ ಇಂತಹ ಸೌಭಾಗ್ಯ ಒದಗಿಸಲಿ ಎಂದು ನಾವೂ ಸದಾ ಆಸೆ ಪಡುತ್ತೇವೆ. ಕಷ್ಟಕರವಾದ ಯಜ್ಞ ತಪಸ್ಸು ವ್ರತ ದಾನ ಮುಂತಾದವುಗಳನ್ನು ಮಾಡಿ ನಾವು ಈ ಸ್ವರ್ಗ ಪಡೆದೆವು. ಆದರೆ ಇಲ್ಲಿ ಭೋಗಗಳೇ ತುಂಬಿರುವುದರಿಂದ ಅವುಗಳನ್ನು ಅನುಭವಿಸುತ್ತಾ ಅನುಭವಿಸುತ್ತಾ ನಮ್ಮ ಸ್ಮರಣಶಕ್ತಿಯೇ ಕುಂದಿಹೋಗಿದೆ. ಹಾಗಾಗಿ ಇಲ್ಲಿ (ಸ್ವರ್ಗದಲ್ಲಿ) ದೇವರ ಸ್ಮರಣೆ ಮಾಡಲು ಬರುವುದೇ ಇಲ್ಲ. ಈ ಲೋಕಗಳಲ್ಲಿ ವಾಸ ಮಾಡುವವರು ಮತ್ತೆ ಜನ್ಮ ತಳೆಯಲೇಬೇಕು. ಈ ಸಂಸಾರ ಚಕ್ರಕ್ಕೆ ಬೀಳಲೇ ಬೇಕು. ಇದರ ಬದಲಿಗೆ ಭಾರತದಲ್ಲಿ ಸ್ವಲ್ಪವೇ ಕಾಲದ ಆಯುಃಪ್ರಮಾಣದ ಜನ್ಮವಾದರೂ ಅದು ಒಳ್ಳೆಯದೇ. ಇಲ್ಲಿ ಜನ್ಮಪಡೆದ ಮನುಷ್ಯರು ಕ್ಷಣಮಾತ್ರದಲ್ಲಿ ಕರ್ಮ, ಅದರ ಫಲವಾದ ಪಾಪ ಪುಣ್ಯ, ಧರ್ಮ... ಇತ್ಯಾದಿ ಎಲ್ಲಾ ಭಗವಂತನಿಗೇ ಅರ್ಪಿಸಿ ಭಯರಹಿತವಾದ ಅವನ ನೆಲೆ ಪಡೆದು ಬಿಡುತ್ತಾರೆ. **'ಕ್ಷಣೇನ ಮರ್ತ್ಯೇನ ಕೃತಂ ಮನಸ್ವಿನಃ ಸಂನ್ಯಸ್ಯ ಸಂಯಾತ್ಯಭಯಂ ಪದಂ ಹರೇಃ ॥'** *(ಭಾಗವತ. ೫.೧೯.೨೩)*

'ಹರಿಕಥಾಮೃತ' ಎಂಬ ನದಿ ಹರಿಯದ, ನದಿಗಳ ಹುಟ್ಟು ಸ್ಥಾನವಾದ ಭಗವದ್ಭಕ್ತರಾದ ಸಾಧುಗಳು ವಾಸಿಸದ, ಯಜ್ಞಪುರುಷನಾದ ಪರಮಾತ್ಮನ ಪೂಜಾ, ಮಹೋತ್ಸವಾದಿ ಸಂಭ್ರಮಗಳಿಲ್ಲದ

ಜಾಗ, ಬ್ರಹ್ಮಲೋಕವೇ ಆದರೂ ಅದು ವಾಸಯೋಗ್ಯವಾದುದಲ್ಲ. ಜೊತೆಗೆ ಇಂತಹ ಪವಿತ್ರವಾದ ಭಾರತದಲ್ಲಿ ಜನ್ಮ ಪಡೆದೂ ಯಾರು ಸಂಸಾರ ಸುಳಿಯಿಂದ ತಪ್ಪಿಸಿಕೊಳ್ಳಲು ಪ್ರಯತ್ನಪಡುವುದಿಲ್ಲವೋ ಅವರು ಆಮಿಷಗಳ ಆಸೆಗೆ ಬೇಡ ಒಡ್ಡಿದ ಬಲೆಗೆ ಮತ್ತೆ ಮತ್ತೆ ಸಿಲುಕುವ ಪಶು ಪಕ್ಷಿ ಪ್ರಾಣಿಗಳಿಗೆ ಸಮಾನರು. '**ನ ವೈ ಯತೇ ರನ್ನಪುನರ್ಭವಾಯ ತೇ ಭೂಯೋ ವನೌಕಾ ಇವ ಯಾಂತಿ ಬಂಧನಂ**' *(ಭಾಗವತ, ೫.೧೯.೨೫)*

ನಿಷ್ಕಾಮದಿಂದ ತನ್ನನ್ನು ಭಜಿಸಿದವರಿಗೆ ತನ್ನನ್ನೇ ಪರಮಾತ್ಮ ಕೊಟ್ಟುಕೊಂಡು ಬಿಡುವ. ಅವನ ಪಾದಾರವಿಂದ ಮಾನವರ ಎಲ್ಲ ಕಾಮಗಳನ್ನೂ ನೆರವೇರಿಸಿಕೊಡುವುದು. ಆದುದರಿಂದ ಸ್ವರ್ಗದಲ್ಲಿ ನಮ್ಮ ಪುಣ್ಯದ ಫಲ ಮುಗಿದು–ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ – ಎಂಬಂತೆ ಮತ್ತೆ ಜನ್ಮ ದೊರಕುವಾಗ ''ಈ ಭಾರತ ವರ್ಷದಲ್ಲಿ ಭಗವಂತನ ಸ್ಮರಣೆಯಿಂದ ಕೂಡಿದ ಮಾನವ ಜನ್ಮ ನಮಗೆ ದೊರಕಲಿ'' ಎಂದು ದೇವತೆಗಳೂ ಪ್ರಾರ್ಥಿಸುತ್ತಾರೆ. ಇದು ಈ ಭರತಭೂಮಿಯ ಪುಣ್ಯತೆಯನ್ನು ಪ್ರತಿಪಾದಿಸುತ್ತದೆ.

ಆದುದರಿಂದಲೇ ಭಕ್ತಾಗ್ರಣಿಗಳಾದ ಕಣ್ಣುರೆಪ್ಪೆ ಮಿಟಿಕಿಸುವಷ್ಟು ಕಾಲವೂ ಭಗವನ್ನಾಮ ಸ್ಮರಣೆಯಿಂದಗಲದೆ ಮೂರೂ ಲೋಕಗಳಲ್ಲಿ ಅಡೆತಡೆ ಇಲ್ಲದೆ ನಿರಂತರ ಸಂಚರಿಸುತ್ತಿರುವ ನಾರದರೂ 'ಈ ಭಾರತದಲ್ಲಿ ಮಾನವನಾಗಿಯೋ ಪಶುಪಕ್ಷಿಕೀಟ ಮೃಗವಾಗಿಯೋ ಕೊನೆಗೆ ಮರ ಕಲ್ಲು ತರಗೆಲೆಯಾಗಿಯಾದರೂ ನನಗೆ ಜನ್ಮವಿರಲಿ' ಎಂದು ಪ್ರಾರ್ಥಿಸುತ್ತಾರೆಂದು ಪುರಾಣಗಳು ತಿಳಿಸುತ್ತವೆ.

### ಸ್ವಾಮಿ ವಿವೇಕಾನಂದರ ಅಭಿಪ್ರಾಯದಲ್ಲಿ 'ಭಾರತದ ಹಿರಿಮೆ'

ಭಾರತದ ಉದ್ದಗಲ ಪರಿವ್ರಾಜಕರಾಗಿ ಸಂಚರಿಸಿದ್ದ, ವಿಶ್ವದ ಅನೇಕ ರಾಷ್ಟ್ರಗಳನ್ನು ಸಂದರ್ಶಿಸಿದ್ದ ಸ್ವಾಮಿ ವಿವೇಕಾನಂದರೂ, 'ಧಾರ್ಮಿಕ ಸಹಿಷ್ಣುತೆಯನ್ನು ಹಾಗೂ ಸಹನೆಯನ್ನು, ಎಲ್ಲಾ ಧರ್ಮಗಳೂ ಸತ್ಯ ಹಾಗೂ ಸ್ವೀಕಾರಯೋಗ್ಯ ಎಂದು ತಮ್ಮ ನಡೆಯಿಂದ ವಿಶ್ವಕ್ಕೆ ಬೋಧಿಸಿದ ಮಹಾಮಹಿಮರ ದೇಶ ಇದು' ಎಂದು ಹೆಮ್ಮೆಪಟ್ಟಿದ್ದಾರೆ. ಜೀವಿಗಳನ್ನು 'ಅಮೃತಾತ್ಮ'ರೆಂದು ಸಂಬೋಧಿಸಿದ, ನೀತಿಗೆ ಹಾಗೂ ಭವ್ಯವಾದ ಸಮಗ್ರಕ್ಕೆ ತವರೂರು ಆದುದು ಈ ದೇಶ. ಸಾಧುಸಂತರ ಪಾದಧೂಳಿಯಿಂದ ಪಾವನಗೊಂಡು ಅನುಗಾಲವೂ ವಿಕಾಸಗೊಳ್ಳುತ್ತಿರುವ ದೇಶ ನಮ್ಮ ದೇಶ. ಆಧ್ಯಾತ್ಮೀಕರಣ ಭಾರತೀಯನ ಬಾಳಿನ ಗುರಿ, ಇದು ಅವನ ನಿತ್ಯಜೀವನದ ಪಲ್ಲವಿ. ಮಹಿಮಾನ್ವಿತರಿಂದ ಹಿಡಿದು ಮರಳಿನ ಧೂಳಿನ ಕಣದವರೆಗೆ ಎಲ್ಲದರಲ್ಲೂ ಅನಂತದ ಅಭಿವ್ಯಕ್ತಿ ಇದೆ ಎಂಬುದನ್ನು ಅನುಭವಿಸಿದ ಸಾಧಕರ ಬೀಡು ಈ ನಾಡು. ಜೀವನವನ್ನು ಅನುಭವಿಸುವ ಆಕಾಂಕ್ಷೆ, ಅದನ್ನು ರಕ್ಷಿಸಿಕೊಳ್ಳಬೇಕೆಂಬ ಉನ್ನತ ಪ್ರಯತ್ನ ದುಃಖವನ್ನೇ ತರುವುದೇ ಹೊರತು ಮತ್ತೇನನ್ನೂ ಅಲ್ಲ. ಚಿರಂತನ ಶಾಂತಿಗೆ ತ್ಯಾಗವೇ ಪ್ರಧಾನ ಎಂಬುದನ್ನು ಕಂಡುಂಡ ಜನರಿರುವ ದೇಶ ಈ ದೇಶ. ಮೃಗೀಯತೆ ಮರೆತು, ಜನನ ಮರಣಾತೀತನಾಗಿ, ಕಿವಿಕಣ್ಣು ಇತ್ಯಾದಿ ಇಂದ್ರಿಯಗಳಿಂದ ಮಂಗಳಮಯವಾದುದನ್ನೇ ನೋಡೋಣ, ಮಂಗಳವಾದದ್ದೇ ಕೇಳೋಣ, ವಿಶ್ವ ಮಂಗಳಮಯವಾದುದನ್ನೇ ಮಾಡೋಣ. ಈ ಆಯುಸ್ಸನ್ನು ದೇವಹಿತಕ್ಕಾಗಿ ಬಳಸೋಣ, ನಿತ್ಯ ಧನ್ಯನಾದ ಅಮೃತಾತ್ಮನಾಗೋಣ ಎಂದು ಜೀವನದ ಧ್ಯೇಯವನ್ನು ಹೊಂದಿ ಅದಕ್ಕನುಗುಣವಾಗಿ ಬದುಕಿದ ಮಹಾಋಷಿಪರಂಪರೆಗೆ ಸೇರಿದ್ದು ಈ ನಾಡು– ಎಂದು ಅಲ್ಲಲ್ಲಿ ತಮ್ಮ ಪ್ರವಚನದಲ್ಲಿ ಈ ನಾಡನ್ನು ಸ್ವಾಮೀಜಿ ಪರಿಚಯಿಸುತ್ತಾ ಈ ನಾಡಿನ ಮಹಿಮೆಯನ್ನು ವಿಶ್ವದಲ್ಲೆಲ್ಲಾ ಸಾರಿದ್ದಾರೆ.

### ತೀರ್ಥ–ಎಂದರೆ..

ಭಾರತದ ಸನಾತನ ಭಾಗವತರು ವಿಶ್ವವನ್ನು, ವಿಶ್ವದಲ್ಲಿನ ಅಣು ಅಣುವನ್ನು ಭಗವಂತನೆಂದೇ ಭಾವಿಸಿ ಅನುಭವಿಸುತ್ತಾರೆ, ಅನುಭವಿಸಿದ್ದಾರೆ. ಆದುದರಿಂದ ಈ ಯಾವುದನ್ನು ಬೇಕಾದರೂ ಹಿಡಿಯಾಗಿ ಅವಲಂಬಿಸಿಕೊಂಡು ತಮ್ಮ ಮೂಲವಾದ ಭಗವಂತನನ್ನು ಸೇರಬಹುದು. ನಮ್ಮನ್ನು ಈ ಭವ (ಜನನ–ಮರಣ)ದ ಆಚೆಗೆ ದಾಟಿಸುವ ಸಾಧನವಾದ ಈ ಎಲ್ಲವೂ ತೀರ್ಥವೇ(ತಾರಯತಿ ಇತಿ ತೀರ್ಥಂ) ಎಂದು ಉಪನಿಷತ್ತಿನ ಋಷಿಗಳೂ ಸಾರಿದ್ದಾರೆ. ಆದುದರಿಂದ ಭಗವಂತನ ನೆಲೆಯಿಂದ ಇಳಿದು ಈ 'ಶರೀರ' ಎಂಬ ಕ್ಷೇತ್ರಕ್ಕೆ ಬಂದೂ ಕೂಡ ತನ್ನ ನೆಲೆಯನ್ನು ಮರೆಯದೆ ತನ್ನ ನೆಲೆಯಾದ ಭಗವಂತನನ್ನು ಸದಾ ಸ್ಮರಣೆಗೆ ತಂದು ಕೊಡುವ ಗುರುತು –ಅಭಿಜ್ಞಾನಗಳು ಈ ತೀರ್ಥಗಳು. ಭಾರತದಾದ್ಯಂತ ಎಲ್ಲಿಂದ ಎಲ್ಲಿಯವರೆಗೆ ಸಾಗಿದರೂ ಒಂದಲ್ಲ ಒಂದು ಕಲ್ಲು ಒಂದು ಗುಡ್ಡ ಒಂದು ಮರ ಒಂದು ಕೆರೆ ಹೀಗೆ... ಎಲ್ಲವೂ ಭಗವಂತನನ್ನು, ಭಗವದ್ಭಕ್ತರೊಡನೆ ಭಗವಂತನಾಡಿದ ಲೀಲೆಗಳನ್ನು, ಭಗವಂತನ ಮಹಿಮೆಗಳನ್ನು ಸಾರುತ್ತವೆ. ಹಾಗಾಗಿ ಇಲ್ಲಿನ ಎಲ್ಲವೂ ತೀರ್ಥವೇ ಎಂಬುದರಲ್ಲಿ ಸಂಶಯವಿಲ್ಲ. ಆದರೂ ಕೆಲವು ವಿಶೇಷವಾದ ಭಗವದ್ಭಾವಭೂಯಿಷ್ಠವಾದ ತೀರ್ಥಕ್ಷೇತ್ರಗಳನ್ನು ಜ್ಞಾನಿಗಳು ಗುರುತಿಸಿಕೊಟ್ಟಿದ್ದಾರೆ. ನಾವು ಸೇರಬೇಕಾದುದು ಅತೀಂದ್ರಿಯ ಕ್ಷೇತ್ರವೇ ಆಗಿದ್ದರೂ ಆ ಕ್ಷೇತ್ರಪ್ರವೇಶಕ್ಕೆ ಬೇಕಾದ ಅರ್ಹತೆಗೆ ಅಗತ್ಯವಾದ ಸಾಧನಗಳ ಕೊರತೆ ಇರುವಂತಹ ಸಾಧಾರಣ ಮುಗ್ಧಜನರ ಉದ್ಧಾರಕ್ಕಾಗಿ ಪರಮಪವಿತ್ರರಾದವರು ತಮ್ಮ ಸಂಗದಿಂದ ಆ ಕ್ಷೇತ್ರಗಳನ್ನು ತೀರ್ಥಗಳಾಗಿ ಮಾಡಿಕೊಟ್ಟಿದ್ದಾರೆ.

ಪರಮಾತ್ಮ ವಸ್ತುವನ್ನು ಕಂಡವರು ತಾವೂ ಭವವನ್ನು ದಾಟಿ ಇತರರನ್ನೂ ದಾಟಿಸುತ್ತಾರೆ. ಆದುದರಿಂದ ಅವರೇ 'ತೀರ್ಥ'ರು. ಅವರ ಮಾತೇ ತೀರ್ಥ, ಅವರ ಸ್ಪರ್ಶ ದರ್ಶನ ಎಲ್ಲಾ ತೀರ್ಥವೇ. ಅಂತಹವರ ಮಹಿಮೆಯಿಂದ ಅಂತಹವರ ಸಾನ್ನಿಧ್ಯದಿಂದ ತೀರ್ಥಗಳಿಗೆ ತೀರ್ಥತ್ವವು ಬರುತ್ತದೆ. ಪವಿತ್ರವಾದ ನದಿಗಳು, ಭಗವಂತನ ದಿವ್ಯ ಮಂಗಳ ವಿಗ್ರಹಗಳಿರುವ ದೇವಾಲಯಗಳು – ಇವುಗಳನ್ನು ಪದೇ ಪದೇ ಸಂದರ್ಶಿಸುವುದರಿಂದ ಕಾಲಾನಂತರದಲ್ಲಿ ಜೀವಿ ಮುಕ್ತನಾಗುತ್ತಾನೆ. ಆದರೆ ಸಾಧುಗಳ ದರ್ಶನ ಮಾತ್ರದಿಂದಲೇ ಆ ಫಲ ದೊರಕುತ್ತದೆ ಎನ್ನುತ್ತದೆ ಭಾಗವತ.

## ತೀರ್ಥಪ್ರಭೇದ

ಈ ತೀರ್ಥಗಳಲ್ಲಿ ಸ್ಥಾವರ ಜಂಗಮ ಮಾನಸ ಎಂದು ಮೂರು ವಿಧವಿದೆ. ಪುಷ್ಕರ, ನೈಮಿಷಾರಣ್ಯ, ಕಾಶೀ, ಗಯೆ, ಬದರಿ, ಕೇದಾರ, ಮುಂತಾದವು ನಿತ್ಯ ಭಾಗವತೋತ್ತಮರ ಸಾನ್ನಿಧ್ಯವುಳ್ಳವು. ಅದರಿಂದ ಅವು ಪವಿತ್ರತಮವಾದ ಸ್ಥಾವರ ತೀರ್ಥಗಳು. ಯಾರಿಗೆ ತಮ್ಮ ಶಿರವೇ ಶ್ರೀಶೈಲ, ಹಣೆ ಕೇದಾರ, ಹುಬ್ಬು ಮೂಗು, ನಡುವಿನ ಸ್ಥಾನ ಕಾಶೀ, ವಕ್ಷಸ್ಥಲ ಕುರುಕ್ಷೇತ್ರ, ಹೃದಯಕಮಲ ಪ್ರಯಾಗ, ಹೃದಯ ಮಧ್ಯಭಾಗ ಚಿದಂಬರ – ಇತ್ಯಾದಿಯಾಗಿ ಸದಾ ಸರ್ವದಾ ಪ್ರಕಾಶಿಸುತ್ತಿರುತ್ತವೆಯೋ ಅಂತಹ ಸಾಧುಗಳು ಜಂಗಮ ತೀರ್ಥಗಳು. **'ಕಾಶೀಕ್ಷೇತ್ರಂ ಶರೀರಂ ತ್ರಿಭುವನ ಜನನೀವ್ಯಾಪಿನೀ ಜ್ಞಾನಗಂಗಾ… ದೇಹೇ ಸರ್ವಂ ಮದೀಯೇ ಯದಿ ವಸತಿ ಪುನಸ್ತೀರ್ಥಮನ್ಯತ್ಕಿಮಸ್ತಿ'** ಎಂಬುದಾಗಿ ಶರೀರದಲ್ಲಿಯೇ ಸಕಲ ಪಾವನಕರ ಕ್ಷೇತ್ರಗಳು ಅನುಭವಕ್ಕೆ ಬರುತ್ತಿರುವಾಗ ಹೊರಗೆ ಇನ್ನಾವ ತೀರ್ಥಕ್ಷೇತ್ರವಿದೆ ಎಂದು ಸಕಲತೀರ್ಥಗಳನ್ನೂ ತಮ್ಮ ಶರೀರದಲ್ಲೇ ಅನುಭವಿಸುವ ಯೋಗಿಯ–ಜ್ಞಾನಿಯ–ಅನುಭಾವಿಯ ಅನುಭವವನ್ನು ಶ್ರೀಶಂಕರರು ತಿಳಿಸುತ್ತಾ ಸಾಧುಗಳೇ ಜಂಗಮ 'ತೀರ್ಥ'ಗಳು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

**ಸತ್ಯಂ ತೀರ್ಥಂ ಕ್ಷಮಾ ತೀರ್ಥಂ ತೀರ್ಥಮಿಂದ್ರಿಯ ನಿಗ್ರಹಃ ।**
**ಸರ್ವಭೂತದಯಾ ತೀರ್ಥಂ ಸರ್ವತ್ರಾರ್ಜವಮೇವ ಚ ॥**
**ದಾನಂ ತೀರ್ಥಂ ದಮಸ್ತೀರ್ಥಂ ಸಂತೋಷಸ್ತೀರ್ಥಮುಚ್ಯತೇ ।**
**ಬ್ರಹ್ಮಚರ್ಯಂ ಪರಂ ತೀರ್ಥಂ ತೀರ್ಥಂ ಚ ಪ್ರಿಯವಾದಿತಾ ॥**

ಇತ್ಯಾದಿಯಾಗಿ ಭಗವಂತನನ್ನು ಎಲ್ಲೆಲ್ಲೂ ಎಲ್ಲದರಲ್ಲೂ ಕಾಣಲು ಬೇಕಾದ ಇಂದ್ರಿಯ ಮನೋ ನೈರ್ಮಲ್ಯ ಸಾಧಕವಾದ ಗುಣಗಳು ಮಾನಸತೀರ್ಥ ಎನ್ನಿಸಿಕೊಳ್ಳುತ್ತವೆ ಎಂದು ಸಾತ್ವತ ಸಂಹಿತೆ ಹೇಳುತ್ತದೆ.

ಕೆಲವು ನಿರ್ದಿಷ್ಟವಾದ ಪುಣ್ಯಕಾಲಗಳಲ್ಲಿ ಸ್ಥಾವರ ತೀರ್ಥಗಳ ಮಹಿಮಾ ಪ್ರಭಾವದ ಅಭಿವ್ಯಕ್ತಿ ವಿಶೇಷವಾಗಿರುವುದೆಂದೂ ಆ ಕಾಲಗಳಲ್ಲಿ ಅಂತಹ ಕ್ಷೇತ್ರಗಳಿಗೆ ಯಾತ್ರೆ ಹೋಗಬೇಕೆಂದೂ ಶಾಸ್ತ್ರಗಳು ತಿಳಿಸುತ್ತವೆ.

## ತೀರ್ಥಯಾತ್ರಾ ಪರಂಪರೆ

ತನ್ನ ನೆಲೆಯನ್ನು ಸೇರಲು ಅಗತ್ಯವಾದ ಇಂದ್ರಿಯ ಹಾಗೂ ಮನಸ್ಸಿನ ನೈರ್ಮಲ್ಯವನ್ನು ಪಡೆಯಲು ಮತ್ತು ಮಾಡಿದ ಪಾಪಗಳನ್ನು ತಪ್ಪು ಕಾರ್ಯಗಳ ಫಲವನ್ನು ತಪ್ಪಿಸಿಕೊಳ್ಳಲಿಕ್ಕಾಗಿ ತೀರ್ಥಯಾತ್ರೆಗಳನ್ನು ಮಾಡುವ ಪರಂಪರೆ ಭಾರತದಲ್ಲಿ ಇತಿಹಾಸ ಪುರಾಣಾದಿಗಳ ಕಾಲದಿಂದಲೂ ಪ್ರಸಿದ್ಧವಾಗಿದೆ. ರಾಮಾಯಣದಲ್ಲಿ ಶ್ರೀರಾಮಲಕ್ಷ್ಮಣರನ್ನು ವಿಶ್ವಾಮಿತ್ರರು ತಮ್ಮೊಡನೆ ತಮ್ಮ ಸಿದ್ಧಾಶ್ರಮಕ್ಕೆ ಕರೆದುಕೊಂಡು ಹೋಗುವಾಗ ದಾರಿಯಲ್ಲಿ ಸಿಗುವ ಆಶ್ರಮಗಳ ನದಿಗಳ ದೇಶಗಳ ಮಹಿಮೆಯನ್ನೆಲ್ಲಾ ಅವರಿಗೆ ತಿಳಿಸುವುದು ಕಂಡುಬರುತ್ತದೆ. ಇದು ತೀರ್ಥಯಾತ್ರೆಯಲ್ಲ, ಆದರೂ ಇದು ಆ ಸ್ವರೂಪದ ಪರಿಚಯ ಮಾಡಿಸುತ್ತದೆಂದು ಭಾವಿಸಬಹುದು. ಮಹಾಭಾರತದಲ್ಲಿ ವನವಾಸ ಕಾಲದಲ್ಲಿ ತನ್ನ ಒಂದು ತಪ್ಪು ನಿರ್ಣಯದಿಂದ ತನ್ನ ತಮ್ಮಂದಿರು ಕಷ್ಟಪಡಬೇಕಾಗಿ ಬಂತೆಂದು ಖಿನ್ನನಾಗಿದ್ದ ಯುಧಿಷ್ಠಿರನನ್ನು ಅವನ ಮನಃಕ್ಲೇಶ ಕಳೆದುಕೊಳ್ಳಲು ತೀರ್ಥಯಾತ್ರೆ ಮಾಡಬೇಕೆಂದು ಧೌಮ್ಯ ಋಷಿ ಹೇಳುವುದು ಕಂಡು ಬರುತ್ತದೆ. ಅರ್ಜುನ ತಾನು ಶಸ್ತ್ರಾರ್ಥ ಸಂಗ್ರಹಣೆಗೆ ಹೊರಟಾಗ ತೀರ್ಥಯಾತ್ರೆಯನ್ನೂ ಜೊತೆಯಲ್ಲಿ ಮಾಡುತ್ತಾನೆ. ಬಲರಾಮ ಕುರುಕ್ಷೇತ್ರ ಯುದ್ಧದ ಆರಂಭಕ್ಕೆ ಮೊದಲೇ ತೀರ್ಥಯಾತ್ರೆಗೆ ಹೊರಟುಬಿಡುತ್ತಾನೆ. ಭಾಗವತದಲ್ಲಿ ವಿದುರ ಉದ್ಧವ ಮೈತ್ರೇಯಾದಿಗಳು ತೀರ್ಥಯಾತ್ರಾ ಸಂದರ್ಭದಲ್ಲಿ ಭೇಟಿಯಾಗಿ ಭಗವಂತನ ಭಗವದ್ಭಕ್ತರ ಲೀಲಾ ವಿಹಾರ ವಿಚಾರಗಳನ್ನೂ ಧರ್ಮತತ್ತ್ವಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುವ ಭಾಗ ಬರುತ್ತದೆ. ಹೈಹಯ ರಾಜ ಕಾರ್ತವೀರ್ಯನನ್ನು ಪರಶುರಾಮನು ವಧಿಸಿದಾಗ ಅವನ ತಂದೆ ಆ ಪಾಪ ಪ್ರಾಯಶ್ಚಿತ್ತಕ್ಕಾಗಿ ತೀರ್ಥಯಾತ್ರೆ ಮಾಡಲು ಹೇಳುತ್ತಾರೆ. ಈ ರೀತಿ ತೀರ್ಥಯಾತ್ರೆ ಮಾಡಿದ ಅನೇಕ ನಿದರ್ಶನಗಳು ದೊರೆಯುತ್ತವೆ.

ಹೀಗೆ ವೇದಮೂಲದಿಂದಲೂ ಭಾರತ – ಭಾರತದ ಮಣ್ಣಿನ ಕಣಕಣದಲ್ಲೂ ಹಾಸು ಹೊಕ್ಕಾಗಿ ಹೋಗಿರುವ ಭಗವತ್ತತ್ತ್ವವನ್ನು ಅರಿತು, ಆ ಅಮೃತಾಸ್ವಾದನೆಯಿಂದ ಸದಾ ಶಾಂತಚಿತ್ತರಾದ ಮಹಾಮಹಿಮ ಜಂಗಮ ತೀರ್ಥಗಳು ಪ್ರವಹಿಸುತ್ತಾ ಇರುವುದನ್ನು ನಾವು ನೋಡುತ್ತೇವೆ. ಹಾಗೆ ಆಂತರಂಗಿಕ ಸಾಧನೆಯಿಂದ ಔನ್ನತ್ಯ ಸಾಧಿಸಲಾಗದ ಜನರು ಭಗವಂತನನ್ನು ಹೃದಯದಲ್ಲಿ ಹೊತ್ತ ಮಹನೀಯರ ದಿವ್ಯ ಸಾನ್ನಿಧ್ಯದಿಂದ ತಮ್ಮ ಶಕ್ತಿಯನ್ನು ಮಹಿಮೆಗಳನ್ನೂ ಹೆಚ್ಚಿಸಿಕೊಂಡ ನಿದರ್ಶನಗಳಿಗೆ ಏನೂ ಕೊರತೆಯಿಲ್ಲ. ಅಂತೆಯೇ ಬಾಹ್ಯ ತೀರ್ಥಗಳ ಸಂದರ್ಶನ ಮಾಡಿ ಕ್ಲೇಶಕಲ್ಮಷಗಳನ್ನು ಕಳೆದುಕೊಳ್ಳುವ ಪರಂಪರೆಯೂ ನಿರಂತರ ಸಾಗುತ್ತ ಬಂದಿರುವುದೂ ಅನುಭವದಲ್ಲಿದೆ.

## ಉಪಸಂಹಾರ

ದೇವತೆಗಳೂ ಜನ್ಮ ತಳೆಯಲು ಹಂಬಲಿಸುವ 'ಭಾರತ'ದ ಮಹಿಮೆಯನ್ನರಿತು, ಅಂತಹ ಮಹಾಮಹಿಮ ಕ್ಷೇತ್ರದಲ್ಲಿ ಭಗವತ್ಕೃಪೆಯಿಂದಲೋ ಪೂರ್ವಜನ್ಮದ ಸುಕೃತದಿಂದಲೋ, ಯಾವ ಕಾರಣದಿಂದಲೋ ದೊರೆತಿರುವ ಮಾನವಜನ್ಮವನ್ನು 'ನ ಚೇದಿಹಾವೇದೀನ್ಮಹತೀ ವಿನಷ್ಟಿಃ' ಎಂಬ ಕೇನೋಪನಿಷತ್ತಿನ ವಾಣಿಯಂತೆ, ಋಷಿಮುನಿಗಳು ನಮ್ಮ ಹಿರಿಯರು ನಡೆದು ಸಾಧಿಸಿ ಪಡೆದ ಪರತತ್ತ್ವವನ್ನು – ಅಮೃತತ್ವವನ್ನು – ಪಡೆದು ಸಾರ್ಥಕಪಡಿಸಿಕೊಳ್ಳದಿದ್ದರೆ, ಉಂಟಾಗುವ ಮಹಾ ನಷ್ಟವನ್ನು ಇನ್ನೆಷ್ಟು ಜನ್ಮ ಪಡೆದು ಭರಿಸಿಕೊಳ್ಳಬೇಕಾಗಬಹುದೋ ತಿಳಿಯದು. ಹಾಗಾಗಿ ಇಂತಹ ಪುಣ್ಯಭೂಮಿಯನ್ನು ಗೌರವಿಸಿ, ಅದರ ಆದರಕ್ಕೆ ಕಿಂಚಿತ್ತೂ ಕುಂದು ಬರದಂತೆ ನಮ್ಮ ಪೂರ್ವಿಕರು ನಡೆದು ನಮಗೆ ತೋರಿಸಿಕೊಟ್ಟಿರುವ ಸದಾಚಾರವನ್ನನುಸರಿಸಿ ಸನ್ಮಾರ್ಗದಲ್ಲಿ ನಡೆದು ನಾವೂ ದಿವ್ಯ ಭವ್ಯ ಭಾರತೀಯರಾಗೋಣ, ಪಡೆದ ಜನ್ಮ ಸಾರ್ಥಕ ಮಾಡಿಕೊಳ್ಳುವಂತೆ ಭಗವಂತನು ಅನುಗ್ರಹಿಸಲಿ, ಕರುಣೆ ತೋರಲಿ ಎಂದು ಮನಮುಟ್ಟಿ ಅರಿಕೆ ಮಾಡಿಕೊಳ್ಳೋಣ. ✽